ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 423
2. ಸದಸ್ಯರ ಹೆಸರು : ಶ್ರೀ ಕೆ.ಟಿ.ಶ್ರೀಕಂಠೇಗೌಡ
3. ಉತ್ತರಿಸಬೇಕಾದ ದಿನಾಂಕ : 04-02-2021
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಮಂಡ್ಯ ಜಿಲ್ಲೆ ಕೆರೆಗೋಡು ಹೋಬಳಿ ಚಿಕ್ಕಬಳ್ಳಿ ಕೆರೆಯ ಪಿಕಪ್ ನಾಲೆಯ ಅಭಿವೃದ್ಧಿ ಕಾಮಗಾರಿ ಅಂದಾಜಿನಲ್ಲಿ ಗೂಳೂರು ಬೆಟ್ಟದ ಬಳಿ 150 ಮೀ. ಉದ್ದದ ಮೇಲ್ಗಾಲುವೆಯನ್ನು ನಿರ್ಮಿಸುವ ಸಂಬಂಧ ಸಮೀಕ್ಷಾ ಕಾರ್ಯ ಕೈಗೊಂಡು, ವಿನ್ಯಾಸ ಹಾಗೂ ಸಾಧ್ಯಾ ಸಾಧ್ಯಾತೆ ಬಗ್ಗೆ ಪರಿಶೀಲನೆಯನ್ನು ಯಾವಾಗ ನಡೆಸಲಾಗಿದೆ; ಸಮೀಕ್ಷಾ ಕಾರ್ಯ ಹಾಗೂ ಸಾಧ್ಯಾ ಸಾಧ್ಯಾತೆಯ ವರದಿಯ ಅಂಶವೇನು;	ಮಂಡ್ಯ ಜಿಲ್ಲೆ, ಕೆರಗೋಡು ಹೋಬಳಿ ಚಿಕ್ಕಬಳ್ಳಿ ಕೆರೆಯ ಪಿಕಪ್ ನಾಲೆಯ ಅಭಿವೃದ್ಧಿ ಕಾಮಗಾರಿಯ ಅಂದಾಜಿನಲ್ಲಿ ಗೂಳೂರು ಬೆಟ್ಟದ ಬಳಿ 120 ಮೀ. ಉದ್ದದ ಮೇಲ್ಗಾಲುವೆಯನ್ನು ನಿರ್ಮಿಸುವ ಸಂಬಂಧ ಕಾವೇರಿ ನೀರಾವರಿ ನಿಗಮದ ವತಿಯಿಂದ ಸಮೀಕ್ಷಾ ಕಾರ್ಯ ಕೈಗೊಂಡು, ವಿನ್ಯಾಸ ಹಾಗೂ ಸಾಧ್ಯಾಸಾಧ್ಯತೆ ವರದಿಗಳಿಗೆ ತೆರವು ಪಡೆಯಲಾಗಿದೆ. ಸಾಧ್ಯಾಸಾಧ್ಯತೆಯ ವರದಿಯಂತೆ ಅಕ್ವಡಕ್ಟ್‌ನ್ನು ನಿರ್ಮಾಣ ಮಾಡುವುದು ಸೂಕ್ತವೆಂದು ನಿರ್ಧರಿಸಲಾಯಿತು ಹಾಗೂ ತೆರವುಗೊಳಿಸಲಾದ ವಿನ್ಯಾಸದಂತೆ ತಯಾರಿಸಲಾದ ರೂ.70.00 ಲಕ್ಷ ಮೊತ್ತದ ಅಂದಾಜಿಗೆ ನಿಗಮದ ತಾಂತ್ರಿಕ ಮಂಜೂರಾತಿ ನೀಡಲಾಗಿದೆ.
ಆ	ಸದರಿ ಕಾಮಗಾರಿಯನ್ನು ಟೆಂಡರ್ ಪಡೆದ ಗುತ್ತಿಗೆದಾರರು ಒಪ್ಪಂದ ಮಾಡಿಕೊಳ್ಳಲು ನಿರಾಕರಿಸಲು ಕಾರಣಗಳೇನು; ಮರು ಟೆಂಡರ್ ಕರೆಯಲಾಗಿದೆಯೇ; ಮರು ಟೆಂಡರ್ ಕರೆಯದೇ ಇರಲು ಕಾರಣಗಳೇನು;	ಸದರಿ ಕಾಮಗಾರಿಗೆ ದಿನಾಂಕ:12-12-2017 ರಂದು ಟೆಂಡರನ್ನು ದ್ವಿ-ಲಕೋಟೆಯಲ್ಲಿ ಆಹ್ವಾನಿಸಲಾಗಿದ್ದು, ತಾಂತ್ರಿಕ ಬಿಡ್ಡ್‌ನ್ನು ದಿನಾಂಕ:26-03-2018 ರಂದು ಅನುಮೋದಿಸಿ, ಆರ್ಥಿಕ ಬಿಡ್ಡನ್ನು ಅನುಮೋದಿಸುವ ಅವಧಿಯಲ್ಲಿ 2018ರಲ್ಲಿ ನಡೆದ ವಿಧಾನ ಸಭಾ ಚುನಾವಣಾ ಪ್ರಕ್ರಿಯೆಯಂತೆ ದಿನಾಂಕ:27-03-2018 ರಿಂದ ಜೂನ್ 2018ರವರೆಗೆ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಟೆಂಡರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ತದನಂತರ ಕಾಮಗಾರಿಯ ಆರ್ಥಿಕ ಬಿಡ್‌ಗೆ ದಿನಾಂಕ:13-07-2018 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಆದರೆ, ಅರ್ಹ ಬಿಡ್ಡುದಾರರು, ನಿರ್ಮಾಣ ಸಾಮಾಗ್ರಿಗಳಿಗೆ ಸಂಬಂಧಿಸಿದಂತೆ, ಟೆಂಡರ್‌ನಲ್ಲಿ ನಮೂದಿಸಿರುವ ದರಗಳು ಮತ್ತು ಮಾರುಕಟ್ಟೆಯ ದರಗಳಲ್ಲಿ ಗಣನೀಯ ವ್ಯತ್ಯಾಸವಿರುವುದರಿಂದ, ಮಾರುಕಟ್ಟೆಯ ದರಗಳಿಗೆ ಕಾಮಗಾರಿಯನ್ನು ನಿರ್ವಹಿಸಲು ಕಷ್ಟಸಾಧ್ಯವಾಗಿದೆ ಎಂದು ಕಾರಣ ನೀಡುವ ಮುಖೇನ ಸದರಿಯವರು ಟೆಂಡರ್ ಸಿಂಧುತ್ವದ ಅವಧಿಯನ್ನು ಮುಂದುವರೆಸಲು ಒಪ್ಪಿಗೆ ನೀಡಿರುವುದಿಲ್ಲ ಹಾಗೂ ಟೆಂಡರ್‌ನ್ನು ರದ್ದುಪಡಿಸಿ ಇ.ಎಂ.ಡಿ ಮೊತ್ತವನ್ನು ಹಿಂತಿರುಗಿಸಲು ಕೋರಿ ದಿನಾಂಕ:16-07-2018 ರಂದು ಮನವಿಯನ್ನು ಸಲ್ಲಿಸಿದ್ದರ ಹಿನ್ನಲೆಯಲ್ಲಿ, ಟೆಂಡರ್‌ನ್ನು ರದ್ದುಪಡಿಸಲಾಗಿದೆ. ನಂತರ, ಈ ಕಾಮಗಾರಿಗೆ ದಿನಾಂಕ:14-11-2018 ರಂದು ಎರಡನೇ ಬಾರಿ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ.

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಇ	ಕಾವೇರಿ ನೀರಾವರಿ ನಿಗಮದ ಮಂಡಳಿಯ 70 ನೇ ಸಭೆಯಲ್ಲಿ ಈ ಕಾಮಗಾರಿಯನ್ನು ಕೈಬಿಟ್ಟಿರುವುದು ನಿಜವೇ; ಕಾರಣಗಳೇನು;	ಹೌದು. 2019-20ನೇ ಸಾಲಿನಲ್ಲಿ ವಿವಿಧ ವಲಯಗಳಿಂದ ಒಟ್ಟಾರೆ ರೂ.16048.00 ಕೋಟಿಗಳ ಕಾರ್ಯಕ್ರಮ ಪಟ್ಟಿ ಅನುಮೋದನೆಗೆ ಕಾವೇರಿ ನೀರಾವರಿ ನಿಗಮಕ್ಕೆ ಬೇಡಿಕೆ ಬಂದಿದ್ದು, ಸದರಿ ಕಾರ್ಯಕ್ರಮ ಪಟ್ಟಿಯನ್ನು ದಿನಾಂಕ:20-09-2019 ರಂದು ನಡೆದ ಕಾವೇರಿ ನೀರಾವರಿ ನಿಗಮದ 70ನೇ ಮಂಡಳಿ ಸಭೆಯ ಮುಂದೆ ಮಂಡಿಸಿದ್ದು, ಮಂಡಳಿಯು ಈಗಾಗಲೇ ಪ್ರಗತಿಯಲ್ಲಿರುವ ರೂ.6254.48 ಕೋಟಿ ಮೊತ್ತದ ಕಾಮಗಾರಿಗಳನ್ನು, ಟೆಂಡರ್ ಪ್ರಕ್ರಿಯೆಯಲ್ಲಿರುವ ರೂ.2663.24 ಕೋಟಿ ಮೊತ್ತದ ಕಾಮಗಾರಿಗಳನ್ನು ಹಾಗೂ ರೂ.2663.24 ಕೋಟಿ ಮೊತ್ತದಲ್ಲಿ ಸೇರ್ಪಡೆಯಾಗದೆ ಪ್ರಸ್ತುತ ಮಂಡಳಿ ಸಭೆಯಲ್ಲಿ ಅನುಮೋದನೆಯಾಗಿರುವ ರೂ.322.54 ಕೋಟಿ ಮೊತ್ತದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಿರುತ್ತದೆ. ಅಂದರೆ ಒಟ್ಟಾರೆ ರೂ.9240.26 ಕೋಟಿಗಳಿಗೆ ಅನುಮೋದನೆ ನೀಡಿರುತ್ತದೆ. ಉಳಿಕೆ ರೂ.6808.65 ಕೋಟಿ (ರೂ.7131.19 ಕೋಟಿ - ರೂ.322.54 ಕೋಟಿ) ಮೊತ್ತದ ಇನ್ನು ಅನುಷ್ಠಾನಗೊಳ್ಳದೆ ಟೆಂಡರ್ ಪ್ರಕ್ರಿಯೆಯಲ್ಲಿರುವ, ತಾಂತ್ರಿಕ ಮಂಜೂರಾತಿ ಆಗಬೇಕಿರುವ ಹಾಗೂ ಟೆಂಡರ್ ಆಹ್ವಾನಿಸಬೇಕಿರುವ ಕಾಮಗಾರಿಗಳನ್ನು ಆಡಳಿತಾತ್ಮಕ ಹಾಗೂ ಆರ್ಥಿಕ ಮಿತವ್ಯಯತೆಯನ್ನು ಕಾಯ್ದುಕೊಳ್ಳುವ ಹಿತದೃಷ್ಟಿಯಿಂದ ಕೈಬಿಡಲು ಸೂಚಿಸಿದ್ದರನ್ವಯ ಸದರಿ ಕಾಮಗಾರಿಯನ್ನು ಕೈಬಿಡಲಾಗಿರುತ್ತದೆ.
ಈ	ಸದರಿ ಕಾಮಗಾರಿಯಿಂದ ರೈತರಿಗೆ / ಸಾರ್ವಜನಿಕರಿಗೆ ತುಂಬ ಉಪಯೋಗವಾಗಲಿದ್ದು, ಈ ಕಾಮಗಾರಿಯನ್ನು ಮತ್ತೆ ಕೈಗೆತ್ತಿಕೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಈ ಕುರಿತು ಸರ್ಕಾರದ ನಿಲುವೇನು;	ಮುಂದುವರೆದ ಕಾಮಗಾರಿಗಳ ಮತ್ತು ಪ್ರಸಕ್ತ ಸಾಲಿನ ಅನುದಾನದ ಲಭ್ಯತೆಯ ಅನುಪಾತ ಹಾಗೂ ಆರ್ಥಿಕ ಇಲಾಖೆಯ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾಪಿತ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.
ಉ	ಗೂಳೂರು ಬೆಟ್ಟದಿಂದ ಮುಂದಕ್ಕೆ ಬರುವ ನೀರು ಸರಾಗವಾಗಿ ಹರಿಯಲು ಎರಡು ಕಲ್ಲುಬಂಡೆ ಅಡ್ಡಲಾಗಿ ಬಂದಿದ್ದು, ಈ ಕಲ್ಲುಬಂಡೆಗಳನ್ನು ಯಾವಾಗ ತೆರವುಗೊಳಿಸಲಾಗುವುದು?	ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ಪರಾಮರ್ಶಿಸಿ, ಅನುಮೋದಿತ ಅಂದಾಜಿನಲ್ಲಿ ಪ್ರಸ್ತಾಪಿಸಿರುವಂತೆ ಅಕ್ವಡಕ್ಟ್‌ನ್ನು ನಿರ್ಮಿಸಿದ್ದಲ್ಲಿ, ಕಲ್ಲುಬಂಡೆಗಳನ್ನು ತೆರವುಗೊಳಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ ಹಾಗೂ ಇದರಿಂದ ಗೂಳೂರು ಬೆಟ್ಟದ ಬಳಿ ನೀರು ಸರಾಗವಾಗಿ ಹರಿಯುತ್ತದೆ.

ಸಂಖ್ಯೆ:ಜಸಂಇ 20 ಎಸ್‌ಎಲ್‌ಎ 2021

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು